ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಹಾಗೂ ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ಕಟ್ಟಡ ಮತ್ತು
ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ

ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029.
ದೂರವಾಣಿ ಸಂಖ್ಯೆ: 080-29753350
karbuildworkerswelfare@gmail.com

ಸಂ: ಸಿಡಬ್ಲ್ಯೂಬಿ/ಸುಂಕ/ಸಿಆರ್- /2021-22 ದಿನಾಂಕ:13-10-2021

## ಸುತ್ತೋಲೆ

ವಿಷಯ: ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ 1996 ಹಾಗೂ ನಿಯಮಗಳು 1998 ರಡಿ ಸುಂಕವನ್ನು ಸಂಗ್ರಹಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ಹಾಗೂ ಕರ್ನಾಟಕ ನಿಯಮಗಳು 2006 ರಡಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಮಂಡಳಿಯಿಂದ ಹಲವಾರು ಸೌಲಭ್ಯಗಳನ್ನು ನೀಡಲಾಗುತ್ತಿದ್ದು, ನೋಂದಾಯಿತ ಫಲಾನುಭವಿಗಳಿಗೆ ನೀಡುವ ಧನ ಭರಿಸಲಾಗುತ್ತಿದೆ. ಈ ಕಾರಣಕ್ಕಾಗಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ 1996 ಹಾಗೂ ನಿಯಮಗಳು 1998 ರಡಿ ಎಲ್ಲಾ ನಿರ್ಮಾಣ ಸಂಸ್ಥೆಗಳಿಂದ ನಿರ್ಮಾಣ ವೆಚ್ಚಕ್ಕೆ ತಗಲುವ ಮೊತ್ತದಲ್ಲಿ ಶೇ.1 ರಷ್ಟು ಸುಂಕವನ್ನು ಸಂಗ್ರಹಿಸಲಾಗುತ್ತಿದೆ. ಸುಂಕ ಸಂಗ್ರಹಣೆಯ ಜವಬ್ದಾರಿಯನ್ನು ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೆ ಕಾಯ್ದೆ ಮತ್ತು ನಿಯಮಗಳನ್ವಯ ಅಧಿಸೂಚನೆಯ ಮೂಲಕ ವಹಿಸಲಾಗಿದೆ. ಹಾಗೂ ಕಾರ್ಮಿಕ ಅಧಿಕಾರಿಗಳನ್ನು ಸುಂಕ ನಿರ್ಧರಣಾಧಿಕಾರಿಗಳನ್ನಾಗಿ ಅಧಿಸೂಚಿಸಲಾಗಿದೆ.

ಕಾಯ್ದೆ ಮತ್ತು ನಿಯಮಗಳಡಿಯಲ್ಲಿ ನೋಂದಾಯಿತ ಫಲಾನುಭವಿಗಳಿಗೆ ವಿವಿಧ ಸೌಲಭ್ಯಗಳನ್ನು ಒದಗಿಸಲು ಹಾಗೂ ಮಂಡಳಿಯ ವ್ಯಾಪ್ತಿಯನ್ನು ವಿಸ್ತರಿಸಿ ಇನ್ನು ಹೆಚ್ಚಿನ ಯೋಜನೆಗಳನ್ನು ಜಾರಿಗೊಳಿಸಲು ಮಂಡಳಿಯ ಸುಂಕ ನಿಧಿಯಲ್ಲಿ ಸಾಕಷ್ಟು ಅನುದಾನದ ಅವಶ್ಯಕತೆ ಇರುತ್ತದೆ. ಆದುದರಿಂದ ಇಲಾಖೆಯ ಎಲ್ಲಾ ಅಧಿಕಾರಿಗಳು ಹಾಗೂ ವಿಶೇಷವಾಗಿ ಕಾರ್ಮಿಕ ಅಧಿಕಾರಿಗಳು ಸುಂಕ ಸಂಗ್ರಹಣೆಯ ಬಗ್ಗೆ, ಕಟ್ಟಡ ಮತ್ತು ಇತರೆ ನಿರ್ಮಾಣ ಸಂಸ್ಥೆಗಳ ಸುಂಕ ನಿರ್ಧರಣೆ ಮಾಡುವ ಬಗ್ಗೆ ಹಾಗೂ ವಿವಿಧ ಶಾಸನಾತ್ಮಕ ಸಂಸ್ಥೆಗಳಲ್ಲಿ ಕಠಾವು ಮಾಡಲಾದ ಸುಂಕವನ್ನು ಮಂಡಳಿಗೆ ಸಂದಾಯ ಮಾಡುವ ಬಗ್ಗೆ ಹೆಚ್ಚಿನ ನಿಗಾವಹಿಸಿ ಕಾರ್ಯನಿರ್ವಹಿಸಲು ಸೂಚಿಸಲಾಗಿದೆ. ಈ ನಿಟ್ಟಿನಲ್ಲಿ ಇಲಾಖೆಯ ಅಧಿಕಾರಿಗಳಿಗೆ ಈ ಕೆಳಕಂಡ ಸೂಚನೆಗಳನ್ನು ಹಾಗೂ ಮಾರ್ಗಸೂಚಿಗಳನ್ನು ನೀಡಲಾಗಿದೆ.

1. ತಮ್ಮ ಕಾರ್ಯವ್ಯಾಪ್ತಿಯಲ್ಲಿ ಕಾಯ್ದೆ ಮತ್ತು ನಿಯಮಗಳು ಅನ್ವಯವಾಗುವ ಎಲ್ಲಾ ನಿರ್ಮಾಣ ಹಂತದಲ್ಲಿರುವ ಸಂಸ್ಥೆಗಳಿಗೆ ಭೇಟಿ ನೀಡುವುದು.
2. ಸಂಸ್ಥೆಯು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ರ ಕಲಂ 7 ಹಾಗೂ ಕರ್ನಾಟಕ ನಿಯಮಗಳು 2006 ರ ನಿಯಮ 15 ಮತ್ತು 16 ರ ಅನ್ವಯ **ನೋಂದಣಿ** ಆಗಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.
3. ಕಾಯ್ದೆಯ ಕಲಂ 46 ರನ್ವಯ ನಿಯೋಜಕರು / ಮಾಲೀಕರು ನಿರ್ಮಾಣ **ಕಾಮಗಾರಿಯ ಪ್ರಾರಂಭದ** ಬಗ್ಗೆ **ಸೂಚನಾ ಪತ್ರವನ್ನು** ನೀಡಿರುವುದನ್ನು ಖಾತರಿಪಡಿಸಿಕೊಳ್ಳುವುದು.

4. ಮಾಲೀಕರು / ನಿಯೋಜಕರು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ 1996 ರ ಕಲಂ 4 ಹಾಗೂ ನಿಯಮಗಳು 1998 ರ ಕಲಂ 6 ರಡಿ **ನಮೂನೆ 1** ಅನ್ನು ಸುಂಕ ನಿರ್ಧರಣಾಧಿಕಾರಿಗಳು ಇವರಿಗೆ ಸಲ್ಲಿಸಿರುವುದನ್ನು ಖಾತರಿಪಡಿಸಿಕೊಳ್ಳುವುದು.
5. ತಮ್ಮ ಸಂಸ್ಥೆಯಲ್ಲಿ ಈಗಾಗಲೇ ನೋಂದಣಿಯಾಗಿರುವ ಎಲ್ಲಾ ನಿರ್ಮಾಣ ಕಾಮಗಾರಿಗಳು ಮುಕ್ತಾಯವಾಗಿದ್ದಲ್ಲಿ ನಿಯಮಾನುಸಾರ ಸದರಿ ಸಂಸ್ಥೆಗಳು ಪಾವತಿಸಬೇಕಾದ **ಸುಂಕದ ಬಗ್ಗೆ ನಿರ್ಧರಣಾ ಆದೇಶವನ್ನು** ಹೊರಡಿಸಿ ಸುಂಕವನ್ನು ವಸೂಲು ಮಾಡಲು ಕ್ರಮಕೈಗೊಳ್ಳುವುದು.
6. ಕೆಲವು ಆಯ್ದೆ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳನ್ನು ಹೊರತು ಪಡಿಸಿ ರಾಜ್ಯಾದಾದ್ಯಂತ ಕಾರ್ಮಿಕ ಅಧಿಕಾರಿಗಳು ಸುಂಕನಿರ್ಧರಣೆಯನ್ನು ಮಾಡದೇ ಇರುವುದನ್ನು ಗಮನಿಸಲಾಗಿದೆ. ಇದರಿಂದ ಕಾಯ್ದೆ ಮತ್ತು ನಿಯಮಾನುಸಾರ ಮಂಡಳಿಗೆ ಸಂಧಾಯವಾಗಬೇಕಾದ ಸುಂಕ ಮೊತ್ತದಲ್ಲಿ ಗಣನೀಯ ಕಡಿತ / ಕೊರತೆ ಉಂಟಾಗುತ್ತದೆ. ಆದುದರಿಂದ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಕಾಯ್ದೆ ಮತ್ತು ನಿಯಮಗಳು ಅನ್ವಯವಾಗುವ ಎಲ್ಲಾ ಕಟ್ಟಡ ಮತ್ತು ಇತರೆ ಸಂಸ್ಥೆಗಳ ಸುಂಕ ನಿರ್ಧರಣೆಯನ್ನು ಮಾಡಲು **ಎಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ಸೂಚಿಸಲಾಗಿದೆ**.
7. ಈ ಸುತ್ತೋಲೆ ಅನ್ವಯ ತಮ್ಮ ಪರಿಶೀಲನೆಯನ್ನು ಕೇವಲ ಕಟ್ಟಡ ನಿರ್ಮಾಣಕ್ಕೆ ಮಾತ್ರ ಸೀಮಿತಗೊಳಿಸದೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ರ ಕಲಂ 2(ಡಿ) ರಲ್ಲಿ ವ್ಯಾಖ್ಯಾನಿಸಿರುವಂತೆ ಇತರೆ ನಿರ್ಮಾಣ ಕಾಮಗಾರಿಗಳನ್ನು ಕೂಡ ಅಂದರೆ, ರಸ್ತೆ ಮತ್ತು ರೈಲು ಲೈನ್‌ಗಳ ನಿರ್ಮಾಣ, ನಿರಾವರಿ ಯೋಜನೆಗಳಿಗೆ ಸಂಬಂಧಿಸಿದ ಕಾಮಗಾರಿಗಳು, ವಿದ್ಯುತ್ ಉತ್ಪಾದನೆ ಮತ್ತು ವಿತರಣೆಗೆ ಸಂಬಂಧಿಸಿದ ಕಾಮಗಾರಿಗಳು, ಟನಲ್‌ಗಳು, ಸೇತುವೆಗಳು, ಡ್ಯಾಂಗಳು, ಕ್ಯಾನಲ್‌ಗಳು, ಪೈಪ್‌ಲೈನ್‌ಗಳ ನಿರ್ಮಾಣ ಕಾಮಗಾರಿಗಳನ್ನು ಕೂಡ ಪರಿಶೀಲಿಸುವುದು.
8. ಸುಂಕ ನಿರ್ಧರಣಾಧಿಕಾರಿಗಳು ಸುಂಕ ನಿರ್ಧರಣೆಯನ್ನು ಮಾಡುವಾಗ ಸಿವಿಲ್ ಕಾಮಗಾರಿಗಳನ್ನಲ್ಲದೆ ಈ ಕೆಳಕಂಡ ನಿರ್ಮಾಣ ಚಟುವಟಿಕೆಗಳನ್ನು ಕೂಡ ಪರಿಗಣಿಸಲು ಸೂಚಿಸಿದೆ.

   A. ಡ್ರೈನೇಜ್, ಸಾಲಿಡ್ ವೇಸ್ಟ್ ಡಿಸ್ಪೊಸಲ್, ಸೀವೇಜ್ ಟ್ರೀಟ್‌ಮೆಂಟ್ ಪ್ಲಾಂಟ್, ಒಳಾಂಗಣ ರಸ್ತೆ ಪಾದಚಾರಿ ಮಾರ್ಗ ಉದ್ಯಾನವನ ನಿರ್ಮಾಣ ವೆಚ್ಚವನ್ನು ಕೂಡ ಪರಿಗಣಿಸುವುದು.

   B. ಪ್ಲಂಬಿಂಗ್ ಮತ್ತು ವಿದ್ಯುತ್ ಕಾಮಗಾರಿಗಳನ್ನೊಳಗೊಂಡಂತೆ ಲಿಫ್ಟ್ / ಫೈರ್ ಅಲಾರಂ ಸಿಸ್ಟಂಸ್ ಮತ್ತು ಸಿಸಿ ಟಿವಿ ಸೆಕ್ಯೂರಿಟಿ ಸಿಸ್ಟಂಸ್

   C. ಕ್ಲಬ್ ಹೌಸ್ / ಕೆಫೆಟೇರಿಯಾ /ನ ಕನ್ವಿನಿಯನ್ಸ್ ಸ್ಟೋರ್ಸ್ / ಗೆಸ್ಟ್ ಹೌಸ್ / ಈಜುಕೊಳ / ಮಕ್ಕಳ ಆಟದ ಮೈದಾನದ ನಿರ್ಮಾಣ ವೆಚ್ಚವನ್ನು ಕೂಡ ಪರಿಗಣಿಸುವುದು.

   D. ಒಳಾಂಗಣ ವಿನ್ಯಾಸ ಮತ್ತು ಅಲಂಕಾರ, ಪಿಠೋಪಕರಣಗಳ ಅಳವಡಿಕೆ, ಪಾರ್ಟಿಷನ್‌ಗಳ ನಿರ್ಮಾಣ ವೆಚ್ಚವನ್ನು ಕೂಡ ಸುಂಕ ನಿರ್ಧರಣೆ ಪರಿಗಣಿಸುವುದು.

9. ಎಲ್ಲಾ ಕಾರ್ಮಿಕ ಅಧಿಕಾರಿಗಳು ತಾವು ಸುಂಕ ನಿರ್ಧರಣೆ ಮಾಡಿದ **ಆದೇಶದ ಪ್ರತಿಯನ್ನು ಆದೇಶದ 07 ದಿನಗಳಲ್ಲಿ ಮಂಡಳಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.**
10. ಕೆಲವು ಪ್ರಕರಣಗಳಲ್ಲಿ ನಿರ್ಧರಣಾಧಿಕಾರಿಗಳು ಕಾಮಗಾರಿಯು ಪ್ರಗತಿಯಲ್ಲಿರುವ ಹಂತದಲ್ಲಿ ಮಧ್ಯಂತರ ಆದೇಶವನ್ನು ಹೊರಡಿಸಿದ್ದು, ಇಂತಹ ಪ್ರಕರಣಗಳಲ್ಲಿ ಕಾಮಗಾರಿ ಪೂರ್ಣವಾಗಿರುವುದನ್ನು ಖಾತರಿಪಡಿಸಿಕೊಂಡು ಅಂತಿಮ ಆದೇಶವನ್ನು ಹೊರಡಿಸಿ ಮಾಲೀಕರು / ನಿಯೋಜಕರು ಹೆಚ್ಚುವರಿ ಸುಂಕ ಪಾವತಿ ಮಾಡಬೇಕಾದ್ದಲ್ಲಿ ಸದರಿ ಹೆಚ್ಚುವರಿ

ಸುಂಕವನ್ನು ವಸೂಲು ಮಾಡಲು ಕ್ರಮಕೈಗೊಳ್ಳುವುದು. **(ಪ್ರತಿಯನ್ನು ಮಂಡಳಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು).**

11. ತಮ್ಮ ಕಛೇರಿಗಳಲ್ಲಿ ನೋಂದಣಿಯಾಗಿರುವ ಹಾಗೂ ನೋಂದಣಿಯಾಗುವ ಕಟ್ಟಡ ಮತ್ತು ಇತರೆ ನಿರ್ಮಾಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ನಿರ್ಮಾಣ ಪರವಾನಿಗೆ / Occupancy Certificate / Completion Certificate ನೀಡಿರುವ ಪ್ರಾಧಿಕಾರವು ಕಟಾವು ಮಾಡಿಕೊಂಡಿರುವ ಸುಂಕವನ್ನು ಮಂಡಳಿಗೆ ರವಾನಿಸಿರುವುದನ್ನು ಖಾತರಿಪಡಿಸಿಕೊಳ್ಳುವುದು.
12. ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಮಾಸಿಕ ವರದಿಯನ್ನು ಪ್ರತಿ ತಿಂಗಳ 05ನೇ ತಾರೀಖಿನೊಳಗೆ ಕಡ್ಡಾಯವಾಗಿ ಮಂಡಳಿಗೆ ಸಲ್ಲಿಸತಕ್ಕದ್ದು.

**ಕಛೇರಿಯ ಹೆಸರು:** **ಮಾಹೆ:**

| ಕ್ರ.ಸಂ | ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕ ಕಾಯ್ದೆ 1996 ರಡಿ ಮಾಹೆಯಲ್ಲಿ ನೋಂದಣಿಯಾದ ಸಂಸ್ಥೆಗಳ ಸಂಖ್ಯೆ | ಮಾಹೆಯಲ್ಲಿ ಸುಂಕ ನಿರ್ಧರಣೆ ಮಾಡಿದ ಪ್ರಕರಣ ಸಂಖ್ಯೆ | ಮಾಹೆಯಲ್ಲಿ ನಿರ್ಧರಣೆ ಮಾಡಿದ ಪ್ರಕರಣಗಳಲ್ಲಿ ಹೆಚ್ಚುವರಿಯಾಗಿ ಪಾವತಿಸಲು ಆದೇಶಿಸಿದ ಸುಂಕದ ಮೊತ್ತ |
|---|---|---|---|
| | | | |
| | | | |
| | | | |

ಇಲಾಖೆಯ ಎಲ್ಲಾ ಅಧಿಕಾರಿಗಳು ಈ ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸುಂಕವನ್ನು ನಿರ್ಧರಿಸಲು ಸೂಚಿಸಲಾಗಿದೆ.

13/10/21

(ಅಕ್ರಂ ಪಾಷ ಭಾ.ಆ..ಸೇ)
ಕಾರ್ಯದರ್ಶಿ ಹಾಗೂ
ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು
ಕ.ಕ&ಇ.ನಿ.ಕಾ.ಕ ಮಂಡಳಿ
ಬೆಂಗಳೂರು

ಗೆ,

1. ಎಲ್ಲಾ ಹಿರಿಯ ಕಾರ್ಮಿಕ ನಿರೀಕ್ಷಕರುಗಳು/ಕಾರ್ಮಿಕ ನಿರೀಕ್ಷಕರುಗಳು – ಕಾರ್ಮಿಕ ಅಧಿಕಾರಿಗಳ ಮೂಲಕ
2. ಎಲ್ಲಾ ಕಾರ್ಮಿಕ ಅಧಿಕಾರಿಗಳು

**ಪ್ರತಿಯನ್ನು:**

ಎಲ್ಲಾ ಉಪ ಕಾರ್ಮಿಕ ಆಯುಕ್ತರುಗಳ / ಎಲ್ಲಾ ಸಹಾಯಕ ಕಾರ್ಮಿಕ ಆಯುಕ್ತರುಗಳ ಮಾಹಿತಿಗಾಗಿ